# ಮಾತು-ಕತೆ

ಮೊದಲ ಬರಹ ಅದು. ಕಳವಿನ ಬಾಗಿಲ ಬಗ್ಗೆ, ಅಲ್ಲಿನ ಕಬ್ಬಿನ ತೋಟಗಳು, ನಾವು ಕದ್ದುತಂದು ಕಬ್ಬುತಿಂದಿದ್ದರ ಬಗ್ಗೆ, ಆಲೆಮನೆಗೆ ಹೋಗಿ ಸಿಹಿ ಬೆಲ್ಲಗಳನ್ನು ತಿಂದಿದ್ದು ಎಲ್ಲ ಬರೆದಿದ್ದೆ. ಬೇರೆ ಯಾರೂ ಪ್ರಬಂಧ ಬರೆದುತಂದಿರಲಿಲ್ಲ; ನಾನೊಬ್ಬ ಮಾತ್ರ ತಂದಿದ್ದು. ನಾನು ಕೊಡಬೇಕಾ ಬೇಡವಾ ಎಂಬ ಅನುಮಾನದಲ್ಲಿಯೇ ಇದ್ದೆ. ಮೇಸ್ಟ್ರು ನನ್ನ ಕೈಯಲ್ಲಿದ್ದ ಪೇಪರನ್ನು ನೋಡಿ ಎಳ್ಕಂಡು ಓದಿದ್ರು. ಓದಿ ಥಟ್ಟನೇ ಅವರು ಹೇಳಿದ ಮಾತು, 'ಬ್ಯಾರಿ... ನೀನ್ ಬರ್ದದ್ದಾ ಇದು?' ನನಗೆ ಆಗ ಶಾಕ್ ಆಗಿತ್ತು. ಆ ಶಾಕ್ ಈಗಲೂ ಇದೆ ನಂಗೆ. ಏನೋ ಅವರು ಆಶ್ಚರ್ಯದಿಂದಲೂ ಹೇಳಿರಬಹುದು; ತಿರಸ್ಕಾರದಿಂದಲೂ ಹೇಳಿರಬಹುದು. ನನ್ನ ಮೇಲೆ ಅದು ಬಹಳ ನೆಗೆಟಿವ್ ಆಗಿ ಎಫೆಕ್ಟ್ ಆಯ್ತು. ಆ ನಂತರ ನಾನು ಎಲ್ಲಿಯೂ ಬರೆಯಲಿಕ್ಕೇ ಹೋಗಲಿಲ್ಲ. ಭಯ ಆಗ್ತಾ ಇತ್ತು ನಂಗೆ. ಕಾಲೇಜಿನಲ್ಲಿ ಕೂಡ ಬರೀಲಿಕ್ಕೆ ಆಗ್ಲಿಲ್ಲ ನಂಗೆ.

- **ಕಥೆ ಬರೆಯಲಿಕ್ಕೆ ಶುರು ಮಾಡಿಕೊಂಡಿದ್ದು ಯಾವಾಗ? ಅದಕ್ಕೆ ಪ್ರೇರಣೆ ಆದ ಸಂಗತಿಗಳೇನು?**

ಸಾಧಾರಣ 1970ರಲ್ಲಿ. ನನಗೆ ಓದುವ ಹುಚ್ಚು ಬಹಳ ಇತ್ತು. ನರಸಿಂಹಯ್ಯನವರ ಪತ್ತೆದಾರಿ ಕಾದಂಬರಿಗಳಿಂದ ಹಿಡಿದು ಬಿ.ಪಿ. ಕಾಳೆ ಅವರ ಕಾಮಸಂಬಂಧಿ ಪುಸ್ತಕಗಳವರೆಗೆ ಎಲ್ಲವನ್ನೂ ಓದ್ತಾ ಇದ್ದೆ. ನಾವೊಂದು ಏಳೆಂಟು ಹುಡುಗರಿದ್ದೆವು. ಎಲ್ರಿಗೂ ಓದೋದಂದ್ರೆ ಭಾಳ ಖುಷಿ. ಕೋಟೆ ಸುತ್ತಮುತ್ತ ಎರಡು ಮೂರು ಲೈಬ್ರರಿ ಇದ್ದವು. ಅಲ್ಲೆಲ್ಲ ಮೆಂಬರ್‌ಶಿಪ್ ಮಾಡಿಸ್ಕೊಂಡು ಪುಸ್ತಕಗಳನ್ನು ಮನೆಗೆ ತಂದು ಓದ್ತಿದ್ದೆವು.

ಮನೆಯಲ್ಲಿ ಅಜ್ಜಿ ಮತ್ತು ತಾಯಿ ಮಾಪಳ ಪಾಠಗಳನ್ನು ಓದಿ ಅದರಲ್ಲಿ ಬರುವ ಕಥೆಗಳನ್ನು ನಮಗೆ ಹೇಳ್ತಾ ಇದ್ರು. ಅದು ಬಹಳ ಇಷ್ಟವಾಗ್ತಿತ್ತು. ನಮ್ಮ ಮನೆಯ

